262 (156) : ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆ ಸ್ಥಾನಮಾನ ನೀಡಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಸರ್ಕಾರ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಹಿರಿಯ ವಿದ್ವಾಂಸರು ಹಾಗೂ ಗಣ್ಯರನ್ನೊಳಗೊಂಡ ಸಭೆಯಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ನೀಡುವ ಕುರಿತು ಭಾರತ ಸರ್ಕಾರಕ್ಕೆ ಸಲ್ಲಿಸಬೇಕಾದ ಮನವಿಯ ಬಗ್ಗೆ ವಿದ್ವಾಂಸರು ಅಭಿಪ್ರಾಯಗಳನ್ನು ನೀಡಿದ್ದು, ಆ ಅಭಿಪ್ರಾಯಗಳನ್ನು ಒಳಗೊಂಡಂತೆ. ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಒಂದು ಮನವಿಯನ್ನು ಸಿದ್ದರಪಡಿಸಲಾಗುತ್ತಿದೆ.

263 (159) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, ಎಂಎಲ್ಎ (ಶಿವಾಜಿನಗರ) ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈಗಾಗಲೇ ಪೂರ್ಣಗೊಳಿಸಿ ಸಂಚಾರಕ್ಕೆ ಒಳಪಡಿಸಿರುವ ಮೇಲು ಸೇತುವೆ ಹಾಗೂ ಸಬ್‌ವೇಗಳ ವಿವರಗಳನ್ನು ನೀಡುವುದು;

ಆ) 2004ರ ಮೇ ತಿಂಗಳಿಂದೀಚೆಗೆ ಯಾವ ಯಾವ ಮೇಲು ಸೇತುವೆ ಹಾಗೂ ಸಬ್‌ವೇಗಳನ್ನು ಪೂರ್ಣಗೊಳಿಸಲಾಗಿದೆ;

ಇ) 2004–05ರಲ್ಲಿ ಹೊಸದಾಗಿ ಕೈಗೊಂಡ ಮೇಲು ಸೇತುವೆ : ಸಬ್ ವೇ, ಗ್ರೇಡ್ ಸೆಪರೇಟರ್ ಕಾಮಗಾರಿಗಳು ಯಾವುವು ಹಾಗೂ ಇವುಗಳ ಅಂದಾಜು ವೆಚ್ಚವೆಷ್ಟು;

ಈ) 2005ರಲ್ಲಿ ಯಾವ ಯಾವ ಮೇಲು ಸೇತುವೆ; ಸಬ್‌ವೇ, ಗ್ರೇಡ್ ಸಪರೇಟರ್ ಕಾಮಗಾರಿಗಳು ಪೂರ್ಣಗೊಳ್ಳುತ್ತವೆ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) 1) ಬೆಂಗಳೂರು ಮಹಾನಗರ ಪಾಲಿಕೆಯು ಈ ಕೆಳಕಂಡ ಮೇಲು ಸೇತುವೆ/ಸಬ್ ವೇಗಳನ್ನು ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಿದೆ.

i) ಮೈಸೂರು ರಸ್ತೆಯ ಶಿರಸಿ ವೃತ್ತದಿಂದ ಟೌನ್ ಹಾಲ್ ವರೆಗೆ ಮೇಲು ಸೇತುವೆ.
ii) ರಿಚ್‌ಮಂಡ್ ವೃತ್ತ ಮೇಲು ಸೇತುವೆ.
iii) ಲಿಂಗರಾಜಪುರಂ ಆರ್.ಓ.ಬಿ.
iv) ಮೇಖ್ರಿ ಸರ್ಕಲ್ ಗ್ರೇಡ್ ಸೆಪರೇಟರ್
v) ಸಂಗಮ್ ಟಾಕೀಸ್ ಸಬ್‌ವೇ
vi) ಶಿವಾಜಿನಗರ ಬಸ್ ನಿಲ್ದಾಣದ ಸಬ್‌ವೇ (ಬಿ.ಎಂ.ಟಿ.ಸಿ. ವತಿಯಿಂದ ನಿರ್ಮಿಸಿದೆ).

vii) ಫ್ರೇಜರ್ ಟೌನ್ ಪೋಲೀಸ್ ಸ್ಟೇಷನ್ ಬಳಿ ಆರ್.ಯು.ಬಿ.

2) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಿರುವ ಮೇಲು ಸೇತುವೆಗಳು ಈ ಕೆಳಕಂಡಂತಿರುತ್ತವೆ:

i) ಹೊರ ವರ್ತುಲ ರಸ್ತೆ, ವೈಟ್ ಫೀಲ್ಡ್ ರಸ್ತೆ ಕೂಡುವಿಕೆಯಲ್ಲಿ ಮೇಲು ಸೇತುವೆ.

ii) ಬೆನ್ನಿಗಾನಹಳ್ಳಿಯಲ್ಲಿ ಮೇಲು ಸೇತುವೆ.

iii) ಹೆಬ್ಬಾಳದಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ.

iv) ಕೇಂದ್ರ ರೇಷ್ಮೆ ಮಂಡಳಿ (ಹೊಸೂರು ರಸ್ತೆ) ಬಳಿ ಮೇಲು ಸೇತುವೆ.

v) ಬೆಂಗಳೂರು ಡೈರಿ ವೃತ್ತದಲ್ಲಿ ಮೇಲು ಸೇತುವೆ.

ಆ) 1. ಬೆಂಗಳೂರು ಮಹಾನಗರ ಪಾಲಿಕೆಯು ಲಿಂಗರಾಜಪುರ ರೈಲ್ವೇ ಮೇಲು ಸೇತುವೆಯನ್ನು ಪೂರ್ಣಗೊಳಿಸಿದೆ.

2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ಡೈರಿ ವೃತ್ತದಲ್ಲಿನ ಮೇಲು ಸೇತುವೆಯನ್ನು ನವೆಂಬರ್ 2004 ರಲ್ಲಿ ಪೂರ್ಣಗೊಳಿಸಿದ್ದು ಸಂಚಾರಕ್ಕೆ ಮುಕ್ತಗೊಳಿಸಿರುತ್ತದೆ.

ಇ) 1. ಬೆಂಗಳೂರು ಮಹಾನಗರ ಪಾಲಿಕೆಯು 2004–05ನೇ ಸಾಲಿನಲ್ಲಿ ಕೈಗೊಂಡ ಗ್ರೇಡ್ ಸೆಪರೇಟರ್ ಮತ್ತು ರೈಲ್ವೇ ಕೆಳ ಸೇತುವೆಗಳ ವಿವರ ಈ ಕೆಳಕಂಡಂತಿದೆ:

1) ಮೋದಿ ರಸ್ತೆ, ಕಾರ್ಡ್‌ರಸ್ತೆ ಗ್ರೇಡ್ ಸೆಪರೇಟರ್ – ರೂ. 1500.00 ಲಕ್ಷಗಳು

2) ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಬಳಿ ಆರ್.ಯು.ಬಿ. – ರೂ. 220.00 ಲಕ್ಷಗಳು

3) ಮಾಧವ ನಗರ ಆರ್.ಯು.ಬಿ. – ರೂ. 218.75 ಲಕ್ಷಗಳು

2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 2004–05ರಲ್ಲಿ ಆನಂದರಾವ್ ವೃತ್ತದ ಮೇಲು ಸೇತುವೆ ಕಾಮಗಾರಿಯನ್ನು ರೂ. 2760.00 ಲಕ್ಷ ನಿರ್ಮಾಣ ವೆಚ್ಚದಲ್ಲಿ ಕೈಗೊಂಡಿರುತ್ತದೆ.

ಈ) 1. ಬೆಂಗಳೂರು ಮಹಾನಗರ ಪಾಲಿಕೆಯು ಕೈಗೆತ್ತಿಕೊಂಡಿರುವ ಈ ಕೆಳಕಂಡ ಕಾಮಗಾರಿಗಳು 2005 ರಲ್ಲಿ ಪೂರ್ಣಗೊಳ್ಳುತ್ತವೆ:

1. ಬಾಣಸವಾಡಿ ಆರ್.ಓ.ಬಿ.

2. ಮೋದಿ ರಸ್ತೆ, ಕಾರ್ಡ್ ರಸ್ತೆ, ಗ್ರೇಡ್ ಸೆಪರೇಟರ್,

3. ನ್ಯಾಷನಲ್ ಕಾಲೇಜ್ ಬಳಿ ಮೇಲು ಸೇತುವೆ.

4. ರಾಜಾಜಿನಗರದ ಪ್ರವೇಶ ದ್ವಾರದ ಗ್ರೇಡ್ ಸೆಪರೇಟರ್.

5. ಮಾದವ ನಗರ ಆರ್.ಯು.ಬಿ.

6. ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಬಳಿ ಆರ್.ಯು.ಬಿ.

2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 2005ನೇ ಸಾಲಿನಲ್ಲಿ ಕೆಳಕಂಡ ಮೇಲು ಸೇತುವೆಗಳನ್ನು ಪೂರ್ಣಗೊಳಿಸಲು ಯೋಜಿಸಿರುತ್ತದೆ.

1. ಜಯದೇವ ಹೃದ್ರೋಗ ಕೇಂದ್ರದ ಬಳಿ ಮೇಲು ಸೇತುವೆ.

2. ಏರ್ ಪೋರ್ಟ್ ರಸ್ತೆ ಬಳಿ ವರ್ತುಲ ರಸ್ತೆ ಕೂಡುವಿಕೆಯಲ್ಲಿನ ಮೇಲು ಸೇತುವೆ,

3. ಆನಂದರಾವ್ ವೃತ್ತದ ಮೇಲು ಸೇತುವೆ.